SEPTEMBER 30, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಕಲ್ಯಾಣ ಕರ್ನಾಟಕದಲ್ಲಿ ನೆರೆ ಹಾವಳಿ;** ಮುಖ್ಯಮಂತ್ರಿಯವರಿಂದ ಇಂದು, ವೈಮಾನಿಕ ಸಮೀಕ್ಷೆ.
- **ಸಾಮಾಜಿಕ, ಶೈಕ್ಷಣಿಕ ಗಣತಿ;** ಕೇವಲ 7 ದಿನಗಳಲ್ಲಿ ಪೂರ್ಣಗೊಳಿಸಿದ, ರಾಮನಗರ ಜಿಲ್ಲೆಯ ಶಿಕ್ಷಕಿ, ಶಾಂತಮ್ಮ.
- **'ಪುನೀತ ರಾಜಕುಮಾರ ಹೃದಯಜ್ಯೋತಿ** ಯೋಜನೆ'; 7 ಸಾವಿರದ 8 ನೂರಾ 15 ಜನರ ಹೃದಯಾಘಾತಕ್ಕೆ, ಸಕಾಲಿಕ ಉಚಿತ ಚಿಕಿತ್ಸೆ.
- **'ನಿಮ್ಮ ಹೃದಯ ಬಡಿತದ ಲಯ ತಪ್ಪಿಸಿಕೊಳ್ಳಬೇಡಿ',** ಧ್ಯೇಯದೊಂದಿಗೆ, ವಿಶ್ವ ಹೃದಯ ಆರೋಗ್ಯ ಜಾಗ್ರತಿ ದಿನ, ಸಂಪನ್ನ.

<><><>

**ಈಗ ವಾರ್ತೆಗಳ ವಿವರ**

<><><>

**ಮುಖ್ಯಮಂತ್ರಿ ಸಿದ್ಧರಾಮಯ್ಯ,** ಇಂದು ಕಲಬುರ್ಗಿಗೆ ಭೇಟಿ ನೀಡಲಿದ್ದಾರೆ. ವಿಶೇಷ ವಿಮಾನದ ಮೂಲಕ, ಬೆಳಗ್ಗೆ 10.40ಕ್ಕೆ ಕಲಬುರ್ಗಿಗೆ ಆಗಮಿಸಿ, ಮಧ್ಯಾಹ್ನ 12.30 ರಿಂದ 1.30ರ ವರೆಗೆ, ನೆರೆ ಬಾಧಿತ ಪ್ರದೇಶಗಳ, ವೈಮಾನಿಕ ಸಮೀಕ್ಷೆ ಕೈಗೊಳ್ಳಲಿದ್ದಾರೆ. ಬಳಿಕ, ಕಲಬುರ್ಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ಮಳೆ ಹಾನಿ ಪ್ರದೇಶದಲ್ಲಿ ಕೈಗೊಳ್ಳಲಾದ ಪರಿಹಾರ ಕಾರ್ಯಗಳನ್ನು ಅವಲೋಕಿಸಲಿದ್ದಾರೆ. ಬೀದರ್, ಕಲಬುರ್ಗಿ, ಯಾದಗಿರಿ ಹಾಗೂ ವಿಜಯಪುರ ಜಿಲ್ಲೆಗಳ ಅಧಿಕಾರಿಗಳೊಂದಿಗೆ, ಮುಖ್ಯಮಂತ್ರಿ ಸಭೆ ನಡೆಸಲಿದ್ದಾರೆ.

<><><>

**ಗದಗ ಜಿಲ್ಲೆಯಲ್ಲಿ, ಅತಿವೃಷ್ಟಿಯಿಂದ** 1 ಲಕ್ಷ 12 ಸಾವಿರದ 438 ಹೆಕ್ಟರ್ ಬೆಳೆ ಹಾನಿಯಾಗಿದೆ. 121 ಕೋಟಿ 33 ಲಕ್ಷ ರೂಪಾಯಿ ಪರಿಹಾರ ಪ್ರಸ್ತಾವವನ್ನು, ಶೀಘ್ರ ಜಿಲ್ಲಾಡಳಿತ ಸಲ್ಲಿಸಲಿದೆ ಎಂದು, ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ತಿಳಿಸಿದ್ದಾರೆ. ಗದಗನಲ್ಲಿ ಮಾತನಾಡಿದ ಅವರು, ಒಟ್ಟು 11 ಸಾವಿರದ 348 ಹೆಕ್ಟರ್ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ. ಜಿಲ್ಲೆಯ 4 ಸಾವಿರದ 3 ನೂರಾ 37 ರೈತರಿಂದ ಬೆಳೆ ನಷ್ಟ ಪರಿಹಾರ ಕೋರಿ, ಅರ್ಜಿಗಳು ಸಲ್ಲಿಕೆಯಾಗಿವೆ ಎಂದರು.

<><><>

**ಬಾಗಲಕೋಟೆ ಜಿಲ್ಲೆ, ಬೀಳಗಿ ವ್ಯಾಪ್ತಿಯಲ್ಲಿ,** 5 ಸಾವಿರದ 920 ಹೆಕ್ಟರ್ ತೋಟಗಾರಿಕೆ ಬೆಳೆ ಹಾಗೂ 7 ಸಾವಿರದ 500 ಹೆಕ್ಟರ್ ಕೃಷಿ ಬೆಳೆ ಹಾನಿಯಾಗಿದೆ ಎಂದು, ಶಾಸಕ ಜೆ.ಟಿ.ಪಾಟೀಲ ತಿಳಿಸಿದ್ದಾರೆ. ಬಾಡಗಂಡಿ ಹಾಗೂ ರೊಳ್ಳಿ ಗ್ರಾಮಗಳಿಗೆ ತೆರಳಿ, ಹಾನಿ ವೀಕ್ಷಿಸಿ,

ಮಾತನಾಡಿದರು. ಒಟ್ಟು, 203 ಮನೆಗಳು ಹಾನಿಗೀಡಾಗಿದ್ದು, ತಾಲೂಕು ಆಡಳಿತ, ಕೂಡಲೇ 5 ಸಾವಿರ ರೂಪಾಯಿ, ಪ್ರತಿ ಮನೆ ಸಂತ್ರಸ್ತರಿಗೆ, ತುರ್ತು ಪರಿಹಾರ ವಿತರಿಸಬೇಕು ಎಂದರು.

<><><>

**ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲೂಕು,** ಅಂಬಾಡಹಳ್ಳಿಯ, ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ, ಶಾಂತಮ್ಮ ಅವರು, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು, ಕೇವಲ 7 ದಿನಗಳಲ್ಲಿ ಪೂರ್ಣಗೊಳಿಸಿ, ಗಮನ ಸೆಳೆದಿದ್ದಾರೆ. ಜಿಲ್ಲಾಧಿಕಾರಿ ಯಶವಂತ ಗುರುಕರ, ಶಿಕ್ಷಕಿ ಶಾಂತಮ್ಮ ಅವರಿಗೆ, ಸಾವಿರದ ಒಂದು ರೂಪಾಯಿ ಬಹುಮಾನ ಹಾಗೂ ಅಭಿನಂದನಾ ಪತ್ರ ನೀಡಿ, ಗೌರವಿಸಿದರು. ಚನ್ನಪಟ್ಟಣ ತಾಲೂಕಿನ, ಹೊಡಿಕೆಹೊಸಹಳ್ಳಿ, ಚನ್ನಂಕೇಗೌಡನ ದೊಡ್ಡಿ ಹಾಗೂ ಗೋವಿಂದೇಗೌಡನ ದೊಡ್ಡಿಯ 86 ಮನೆಗಳ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿ ಕಾರ್ಯ ಪೂರ್ಣಗೊಳಿಸಿ, ಶಿಕ್ಷಕಿ ಶಾಂತಮ್ಮ ಮಾದರಿಯಾಗಿದ್ದಾರೆ.

<><><>

**'ಪುನೀತ ರಾಜಕುಮಾರ ಹೃದಯ** ಜ್ಯೋತಿ ಯೋಜನೆ'ಯಡಿ, 7 ಸಾವಿರದ 8 ನೂರಾ 15 ಜನರಿಗೆ, ಹೃದಯಾಘಾತದ ಸಂದರ್ಭದಲ್ಲಿ, ಸಕಾಲಿಕ ತುರ್ತು ಚಿಕಿತ್ಸೆ ನೀಡಿ, ಪ್ರಾಣಾಪಾಯದಿಂದ ಪಾರು ಮಾಡಲಾಗಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ, ಈ ವಿಷಯ ತಿಳಿಸಿದ ಅವರು, ಹೃದಯ ಜ್ಯೋತಿ ಯೋಜನೆಯಡಿ, 9 ಲಕ್ಷ 21 ಸಾವಿರದ 20 ಜನರಿಗೆ ಇ.ಸಿ.ಜಿ. ಹಾಗೂ 13 ಸಾವಿರದ 5 ನೂರಾ 15 ಜನರಿಗೆ, ಹೃದಯ ಸಂಬಂಧಿ ವಿವಿಧ ಅನಾರೋಗ್ಯಗಳಿಗೆ, ಉಚಿತ ತಪಾಸಣೆ ಹಾಗೂ ಅಗತ್ಯ ಚಿಕಿತ್ಸೆ ಒದಗಿಸಲಾಗಿದೆ ಎಂದರು.

<><><>

**'ನಿಮ್ಮ ಹೃದಯ ಬಡಿತದ ಲಯ ತಪ್ಪಿಸಿಕೊಳ್ಳಬೇಡಿ'** ಎಂಬ ಧ್ಯೇಯದೊಂದಿಗೆ, ವಿಶ್ವ ಹೃದಯ ಆರೋಗ್ಯ ಜಾಗ್ರತಿ ದಿನವನ್ನು, ಆಚರಿಸಲಾಯಿತು.

<><><>

**ಹುಬ್ಬಳ್ಳಿಯ, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ** ಹಾಗೂ ಸಂಶೋಧನಾ ಸಂಸ್ಥೆ, ಕೆ.ಎಂ.ಸಿ. ಆರ್.ಐ. ವಿಶ್ವ ಹೃದಯ ದಿನಾಚರಣೆ ಅಂಗವಾಗಿ, ವಾಕಥಾನ್ ಆಯೋಜಿಸಿತ್ತು.

<><><>

**ವಿಶ್ವ ಹೃದಯ ದಿನದ ಅಂಗವಾಗಿ,** ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಆಸ್ಪತ್ರೆ ಆಯೋಜಿಸಿದ್ದ, ವಾಕಥಾನ್‌ನಲ್ಲಿ, ಸಾವಿರಾರು ಜನ ಪಾಲ್ಗೊಂಡು, ಹೃದಯದ ಆರೋಗ್ಯದ ಕುರಿತು, ಜನ ಜಾಗೃತಿ ಮೂಡಿಸಿದರು.

<><><>

**ಹೃದಯ ಆರೋಗ್ಯ ಕಾಪಾಡಿಕೊಳ್ಳಲು,** ಮುಂಜಾಗ್ರತೆ ಅಗತ್ಯ ಎನ್ನುತ್ತಾರೆ, ಧಾರವಾಡದ, ಎಸ್.ಡಿ.ಎಂ. ನಾರಾಯಣ ಹೃದಯಾಲಯದ, ಹೃದಯ ಆರೋಗ್ಯ ತಜ್ಞ, ಡಾಕ್ಟರ್ ರವಿ ಜೆನ್ನಾಪುರ.

<><><>

**ಹೃದಯ ಆರೋಗ್ಯ ತಜ್ಞ, ಡಾಕ್ಟರ್ ರವಿ ಜೆನ್ನಾಪುರ ಧ್ವನಿ (33) ಸೆಕೆಂದುಗಳು**

<><><>

**ಈಗ ಪ್ರಕಟಣೆ,**
**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**
**(43 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ**

**ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.**

<><><>

**ಸೇವೆ ಮತ್ತು ಸುಶಾಸನ ಧ್ಯೇಯದೊಂದಿಗೆ,** ಪ್ರಧಾನಮಂತ್ರಿನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಸೇವಾ ಪರ್ವದ ಮೂಲಕ, ಪರಿವರ್ತನೆ ಹಾಗೂ ಪ್ರಗತಿಯನ್ನು, ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದಿಂದ ಸಾಧಿಸಲು, ಶ್ರಮಿಸುತ್ತಿದೆ.

<><><>

ಕಳೆದ ಹನ್ನೊಂದು ವರ್ಷಗಳಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ನಿಪುಣ ಭಾರತ ಮಿಷನ್, ಪಿ.ಎಂ. ಶ್ರೀ ಯೋಜನೆ, ರಾಷ್ಟ್ರೀಯ ಪಾಠಕ್ರಮ ಮತ್ತು ಕ್ರೆಡಿಟ್ ಚೌಕಟ್ಟಿನಡಿ, ಬಹುಶಿಸ್ತೀಯ ಅಧ್ಯಯನವನ್ನು, ಶಾಲೆಗಳಿಂದ ವಿಶ್ವವಿದ್ಯಾಲಯಗಳ ವರೆಗೆ, ಪ್ರೋತ್ಸಾಹಿಸುತ್ತಿದೆ.

<><><>

**ಐ.ಐ.ಟಿ.ಗಳು, ಐ.ಐ.ಎಂ.ಗಳು ಮತ್ತು** ಏಮ್ಸ್ ನಂತಹ ಸಂಸ್ಥೆಗಳ ಗುಣಮಟ್ಟಕ್ಕೆ ಆದ್ಯತೆ ಯೊಂದಿಗೆ, 2020ರ ಜುಲೈನಲ್ಲಿ, ಶಾಲಾ ಶಿಕ್ಷಣ, ತಾಂತ್ರಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣದಲ್ಲಿ, ಸುಧಾರಣೆಯ ಗುರಿಯೊಂದಿಗೆ, ರಾಷ್ಟ್ರೀಯ ಶಿಕ್ಷಣ ನೀತಿ, ಜಾರಿಗೊಂಡಿತು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** 'ಕೇಂದ್ರ ಸರ್ಕಾರ, 21 ನೇ ಶತಮಾನದ ಅಗತ್ಯತೆಗಳನ್ನು ಪೂರೈಸಲು, ದೇಶದ ಶಿಕ್ಷಣ ವ್ಯವಸ್ಥೆಯನ್ನು ಆಧುನೀಕರಿಸುತ್ತಿದೆ' ಎಂದಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 15 ಸೆಕೆಂದುಗಳು**

<><><>

**ಶಾರದೀಯ ನವರಾತ್ರಿಯ ಎಂಟನೇ ದಿನವಾದ ಇಂದು, ದುರ್ಗಾಷ್ಟಮಿ.** ನಾಡಿನಾದ್ಯಂತ ದೇವಿ ಮಂದಿರಗಳಲ್ಲಿ, ದುರ್ಗಾ ಮಾತೆಗೆ ಹಾಗೂ ಮಹಾ ಗೌರಿಗೆ, ವಿಶೇಷ ಪೂಜೆಯನ್ನು, ಶ್ರದ್ಧಾ–ಭಕ್ತಿಯಿಂದ, ಹೆಂಗಳೆಯರು ಸಲ್ಲಿಸುತ್ತಿದ್ದಾರೆ.

<><><>

**ಶರನ್ನವರಾತ್ರಿ ಹಾಗೂ ದಸರಾ ಆಚರಣೆಯ,** ವೈಶಿಷ್ಟ್ಯದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಚಿಕ್ಕಮಗಳೂರು ಜಿಲ್ಲೆ, ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ದೇಗುಲದ ಧರ್ಮಕರ್ತೃ, ಭೀಮೇಶ್ವರ ಜೋಶಿ.

<><><>

**ಡಾ. ಭೀಮೇಶ್ವರ ಜೋಶಿ ಧ್ವನಿ 38 ಸೆಕೆಂದುಗಳು**

<><><>

**ಸ್ವಚ್ಛತೆಯೇ ಸೇವೆ ಧ್ಯೇಯ ಸಂಗೀತ 10 ಸೆಕೆಂದುಗಳು**

<><><>

**ಆಕಾಶವಾಣಿ ಭದ್ರಾವತಿ ಕೇಂದ್ರದಲ್ಲಿ,** ಕ್ಷಿಪ್ರ ಕಾರ್ಯಾಚರಣೆ ಪಡೆ 97ನೇ ತುಕಡಿ, ಸ್ವಚ್ಛತಾ ಹೀ ಸೇವಾ ಅಭಿಯಾನದಡಿ, ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿತು. ಕಮಾಂಡೆಂಟ್ ಕಮಲೇಶಕುಮಾರ, ಆಕಾಶವಾಣಿ ಭದ್ರಾವತಿ ಕೇಂದ್ರದ ತಾಂತ್ರಿಕ ಮುಖ್ಯಸ್ಥ ಎಸ್.ಎಸ್.ಕೃಷ್ಣಪ್ಪ, ಕಾರ್ಯಕ್ರಮ ಮುಖ್ಯಸ್ಥ ಎಸ್.ಆರ್.ಭಟ್ ಹಾಗೂ ಆಕಾಶವಾಣಿ ಸಿಬ್ಬಂದಿ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡರು.

<><><>

ನಿಧನ ವಾರ್ತೆ

<><><>

**ಹಿರಿಯ ರಂಗಭೂಮಿ ಕಲಾವಿದ, ನಟ,** ಯಶವಂತ ಸರದೇಶಪಾಂಡೆ, ಬೆಂಗಳೂರಿನಲ್ಲಿ ನಿನ್ನೆ ನಿಧನರಾಗಿದ್ದಾರೆ. ಅವರಿಗೆ 60 ವರ್ಷ ವಯಸ್ಸಾಗಿತ್ತು. ಅವರು ಮೂಲತಃ ವಿಜಯಪುರ ಜಿಲ್ಲೆ, ಬವಸವನ ಬಾಗೇವಾಡಿ ತಾಲೂಕು, ಉಕ್ಕಲಿ ಗ್ರಾಮದವರು.  ಇಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 12 ಗಂಟೆಯ ವರೆಗೆ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಹಿಂಭಾಗದ, ಸಂಸ ಬಯಲು ರಂಗಮಂದಿರದಲ್ಲಿ, ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಇಡಲಾಗುತ್ತಿದೆ. ಬಳಿಕ ಚಾಮರಾಜಪೇಟೆ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ತಿಳಿಸಿದೆ.

<><><>

**ಅಮೆರಿಕದ ಸ್ಟ್ಯಾನ್‌ಫೋರ್ಡ್** ವಿಶ್ವವಿದ್ಯಾಲಯ ಪ್ರಕಟಿಸಿದ, ಜಾಗತಿಕ ಮಟ್ಟದ ಸಾಧಕ ವಿಜ್ಞಾನಿಗಳ ಪಟ್ಟಿಯಲ್ಲಿ, ಬಳ್ಳಾರಿಯ, ವಿಜಯನಗರ ಶ್ರೀ ಕೃ ಣ್ಣದೇವರಾಯ ವಿಶ್ವವಿದ್ಯಾಲಯದ, ಮೂವರು ಪ್ರಾಧ್ಯಾಪಕರು, ಸ್ಥಾನ ಪಡೆದಿದ್ದಾರೆ. ಗಣಿತಶಾಸ್ತ್ರ ವಿಭಾಗದ ಕೆ.ವಿ.ಪ್ರಸಾದ, ಗಣಕ ವಿಜ್ಞಾನ ವಿಭಾಗದ, ಹನುಮೇಶ ವೈದ್ಯ ಹಾಗೂ ರಸಾಯನಶಾಸ್ತ್ರ ವಿಭಾಗದ ಕೆ.ಎಸ್.ಲೋಕೇಶ, ಗುಣಮಟ್ಟದ ವೈಜ್ಞಾನಿಕ ಲೇಖನಗಳನ್ನು ಪ್ರಕಟಿಸಿ, ಪ್ರತಿಷ್ಟಿತ ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ.

<><><>

**88ನೇ ಅಖಿಲ ಭಾರತ ಕನ್ನಡ** ಸಾಹಿತ್ಯ ಸಮ್ಮೇಳನ, ಬಳ್ಳಾರಿಯಲ್ಲಿ ಆಯೋಜಿತವಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್, ನಗರದ ಮೂರು ಸ್ಥಳಗಳನ್ನು, ಸಮ್ಮೇಳನಕ್ಕಾಗಿ ಪರಿಶೀಲಿಸಿದರು. ಬಳ್ಳಾರಿಯಲ್ಲಿ 68 ವರ್ಷಗಳ ಬಳಿಕ, ಬರುವ ಡಿಸೆಂಬರ್‌ನಲ್ಲಿ ಸಮ್ಮೇಳನ ನಡೆಯಲಿದೆ. ಅರ್ಥಪೂರ್ಣವಾಗಿ ಸಂಘಟಿಸಲು, ಸದ್ಯದಲ್ಲೇ ಸ್ವಾಗತ ಸಮಿತಿ ರಚನೆಯಾಗಲಿದೆ ಎಂದು, ಸಚಿವರು ತಿಳಿಸಿದರು.

<><><>

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಕಲ್ಯಾಣ ಕರ್ನಾಟಕದಲ್ಲಿ ನೆರೆ ಹಾವಳಿ;** ಮುಖ್ಯಮಂತ್ರಿಯವರಿಂದ ಇಂದು, ವೈಮಾನಿಕ ಸಮೀಕ್ಷೆ.

- **ಸಾಮಾಜಿಕ, ಶೈಕ್ಷಣಿಕ ಗಣತಿ;** ಕೇವಲ 7 ದಿನಗಳಲ್ಲಿ ಪೂರ್ಣಗೊಳಿಸಿದ, ರಾಮನಗರ ಜಿಲ್ಲೆಯ ಶಿಕ್ಷಕಿ, ಶಾಂತಮ್ಮ.
- **'ಪುನೀತ ರಾಜಕುಮಾರ ಹೃದಯಜ್ಯೋತಿ** ಯೋಜನೆ'; 7 ಸಾವಿರದ 8 ನೂರಾ 15 ಜನರ ಹೃದಯಾಘಾತಕ್ಕೆ, ಸಕಾಲಿಕ ಉಚಿತ ಚಿಕಿತ್ಸೆ.
- **'ನಿಮ್ಮ ಹೃದಯ ಬಡಿತದ ಲಯ ತಪ್ಪಿಸಿಕೊಳ್ಳಬೇಡಿ',** ಧ್ಯೇಯದೊಂದಿಗೆ, ವಿಶ್ವ ಹೃದಯ ಆರೋಗ್ಯ ಜಾಗ್ರತಿ ದಿನ, ಸಂಪನ್ನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>